# ಸಿವಿಲ್ ಜಡ್ಜ್ ಮತ್ತು ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಗ್ಗಡದೇವನಕೋಟೆ

ಸಿ.ಸಿ. ನಂಃ 329/2017

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಜಿ.ವಿ. ಗೌರಿಶಂಕರ | ಪಿ.ಡಬ್ಲ್ಯೂ- 1 |
| ತಂದೆಯ ಹೆಸರು | : | ಜಿ. ವೆಂಕಟೇಶ್ | ಎಎಸ್ಐ |
| ವಯಸ್ಸು | : | 55 ವರ್ಷ | |
| ಉದ್ಯೋಗ | : | ಎ.ಎಸ್.ಐ.<br>ಹೆಚ್.ಡಿ.ಕೋಟೆ ಪೋಲಿಸ್ ಠಾಣೆ | ಸಾಕ್ಷಿಗೆ ಪ್ರಮಾಣ ವಚನ ಭೋದಿಸಿದ<br>ದಿನಾಂಕಃ 01.09.2021 |
| ವಾಸಸ್ಥಳ | : | ಹೆಗ್ಗಡದೇವನಕೋಟೆ | ಕಲಂ 299 ಸಿಆರ್ ಪಿಸಿ ರೀತ್ಯಾ |

ಮುಖ್ಯ ವಿಚಾರಣೆಃ ಎಪಿಪಿ ರವರಿಂದಃ

ನಾನು ದಿಃ 15.01.2017 ರಿಂದ ಹೆಗ್ಗಡದೇವನಕೋಟೆಯ ಪೋಲಿಸ್ ಠಾಣೆಯಲ್ಲಿ ಎ.ಎಸ್.ಐ.ಆಗಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ. ಈ ಪ್ರಕರಣದಲ್ಲಿ ನ್ಯಾಯಾಲಯವು ಆರೋಪಿಯಾದ ತಮ್ಮಣ್ಣ @ ಸತೀಶ ಬಿನ್ ಮರಿಸ್ವಾಮಪ್ಪ, ಹತ್ವಾಳು ಗ್ರಾಮ ರವರ ವಿರುದ್ದ ಹೊರಡಿಸಿದಂತಹ ಉದ್ಘೋಷಣಾ ಮತ್ತು ಜಪ್ತಿ ವಾರೆಂಟ್ ನ್ನು ದಿಃ 20.11.2020 ರಂದು ಸ್ವೀಕರಿಸಿ, ದಿಃ 29.11.2020 ರಂದು ಅವರು ವಾಸ ಮಾಡುತ್ತಿದ್ದಾರೆ ಎಂದು ಹೇಳಲಾದ ಕಂಚಮಳ್ಳಿ ಗ್ರಾಮ ಪಂಚಾಯಿತಿ ಮುಂಭಾಗ, ಸಾರ್ವಜನಿಕರು, ಪಂಚಾಯಿತಿದಾರರು ಮತ್ತು ಬಾತ್ಮೀದಾರನ್ನು ಬರಮಾಡಿಕೊಂಡು ವಿಚಾರಣೆ ಮಾಡಿರುತ್ತೇನೆ. ಆರೋಪಿಯು ಹೀಗೆ ಒಂದು ವರ್ಷದಿಂದ ಗ್ರಾಮದಲ್ಲಿ ಕಾಣುತ್ತಿಲ್ಲ ಎಂದು ತಿಳಿಸಿರುತ್ತಾರೆ. ನಂತರ ಆರೋಪಿ ವಿರುದ್ದ ನ್ಯಾಯಾಲಯವು ಹೊರಡಿಸಿದ್ದಂತಹ ಉದ್ಘೋಷಣಾ ಮತ್ತು ಜಪ್ತಿ ವಾರೆಂಟ್ ನ ಬಗ್ಗೆ ಸಾರ್ವಜನಿಕರಿಗೆ ಮಾಹಿತಿಯನ್ನು ಕೊಟ್ಟಿರುತ್ತೇನೆ. ಆರೋಪಿಯು ತಲೆ ಮರೆಸಿಕೊಂಡಿರುವ ಬಗ್ಗೆ ಟಂಟಂ ಮಾಡಿಸಿ, ಸ್ಥಳದಲ್ಲಿ ಮಹಜರ್ ಕ್ರಮವನ್ನು ಜರುಗಿಸಿ , ನಂತರ ಆರೋಪಿಯ ವಿರುದ್ದ ಹೊರಡಿಸಲಾದ ಉದ್ಘೋಷಣಾ ಪ್ರತಿಯನ್ನು ಕಂಚಮಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯದ ಮುಂಭಾಗದ ಕಾಪೌಂಡ್ ಗೋಡೆಗೆ ಅಂಟಿಸಿರುತ್ತೇನೆ. ನಂತರ ಆರೋಪಿಯು ಎಲ್ಲಿಯಾದರೂ ಕಂಡುಬಂದಲ್ಲಿ ಹತ್ತಿರದ ಪೋಲಿಸ್ ಠಾಣೆಗಾಗಲೀ ಅಥವಾ ನ್ಯಾಯಾಲಯಕ್ಕೆ ತಿಳಿಸುವಂತೆ ಮನವಿ ಮಾಡಿರುತ್ತೇನೆ.

ನಂತರ ದಿಃ 30.11.2020 ರಂದು ನ್ಯಾಯಾಲಯದ ಆವರಣದ ಮುಂಭಾಗ ಆರೋಪಿಯ ಬಗ್ಗೆ ಸಾರ್ವಜನಿಕರಲ್ಲಿ ವಿಚಾರ ಮಾಡಲಾಗಿ, ಯಾರಿಗೂ ಸಹ ಆರೋಪಿಯ ಬಗ್ಗೆ ವಿಚಾರ ತಿಳಿದಿರುವುದಿಲ್ಲ ಎಂದು ತಿಳಿಸಿರುತ್ತಾರೆ. ನಂತರ ಸಾರ್ವಜನಿಕರಿಗೆ ಆರೋಪಿಯ ವಿರುದ್ಧ ನ್ಯಾಯಾಲಯವು ಹೊರಡಿಸದಂತಹ ಉದ್ಘೋಷಣಾ ಮತ್ತು ಜಪ್ತಿ ವಾರೆಂಟ್‌ನ ಬಗ್ಗೆ ತಿಳಿಸಿರುತ್ತೇನೆ. ನಂತರ ನ್ಯಾಯಾಲಯದ ಆವರಣದ ಮುಂಭಾಗ ಟಂಟಂ ಮಾಡಿಸಿ, ಮಹಜರ್ ಕ್ರಮವನ್ನು ಜರುಗಿಸಿ ಉದ್ಘೋಷಣಾ ಪ್ರತಿಯನ್ನು ನ್ಯಾಯಾಲಯದ ಕಾಂಪೌಂಡ್ ಗೋಡೆಗೆ ಅಂಟಿಸಿರುತ್ತೇನೆ. ನಂತರ ಆರೋಪಿಯು ಎಲ್ಲಿಯಾದರೂ ಕಂಡುಬಂದಲ್ಲಿ ಹತ್ತಿರದ ಪೋಲಿಸ್ ಠಾಣೆಗಾಗಲೀ ಅಥವಾ ನ್ಯಾಯಾಲಯಕ್ಕೆ ತಿಳಿಸುವಂತೆ ಮನವಿ ಮಾಡಿರುತ್ತೇನೆ.

ಆರೋಪಿಗೆ ಸಂಬಂಧಿಸಿದ ಚರಾಸ್ತಿ ಮತ್ತು ಸ್ಥಿರಾಸ್ತಿಗಳ ಬಗ್ಗೆ ದಿಃ 17.12.2020 ರಂದು ಕಂಚಮಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯಕ್ಕೆ ಮನವಿಯನ್ನು ಸಲ್ಲಿಸಿರುತ್ತೇನೆ. ನಂತರ ದಿಃ 20.12.2020 ರಂದು ಆರೋಪಿಯ ಹೆಸರಿನಲ್ಲಿ ಯಾವುದೇ ಚರ ಮತ್ತು ಸ್ಥಿರ ಆಸ್ತಿಗಳು ಇರುವುದಿಲ್ಲ ಎಂಬ ವರದಿಯನ್ನು ಸ್ವೀಕರಿಸಿರುತ್ತೇನೆ ಅದನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸದರಿ ಆರೋಪಿಗೆ ಸಂಬಂಧಿಸಿದಂತೆ ದಿಃ 29.11.2020 ರಂದು ಗಾಗೇನಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯದ ಮುಂಭಾಗ ಮಾಡಲಾದ ಮಹಜರ್ ನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ದಿಃ 30.11.2020 ರಂದು ನ್ಯಾಯಾಲಯದ ಆವರಣದ ಮುಂಭಾಗ ಮಾಡಿದ ಮಹಜರ್ ನ್ನು ಹಾಜರುಪಡಿಸಿದ್ದು ಅದನ್ನು ನಿಪಿ-2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ದಿಃ 20.12.2020 ರಂದು ಕಂಚಮಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯಿಂದ ನೀಡಲಾದ ಪತ್ರವನ್ನು ನಿಪಿ-3 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

(ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಒ.,

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೆಗ್ಗಡದೇವನಕೋಟೆ.